ಕ್ರೀಡಾಂಗಣ ನಿರ್ಮಿಸುವುದು

೨೩೫೬. ಶ್ರೀ ಸ್ವಾಮಿರಾವ್ (ಹೊಸನಗರ).—ಪೌನ್ಯ ಗಣಿ ಮತ್ತು ಭೂ ವಿಜ್ಞಾನ ಮತ್ತು ಯುವಜನ ಸೇವಾ ಹಾಗೂ ಕ್ರೀಡೆಗಳ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತಾಲ್ಲೂಕಿಗೊಂದು ಕ್ರೀಡಾಂಗಣ ನಿರ್ಮಿಸುವ ಯೋಜನೆಯು ಸರ್ಕಾರದ ಗಮನದಲ್ಲಿದೆಯೆ?

ಆ) ಹೊಸನಗರ ಕ್ರೀಡಾಂಗಣದ ನಿರ್ಮಾಣದ ಕಾಮಗಾರಿಯು ಯಾವ ಹಂತದಲ್ಲಿದೆ

ಶ್ರೀ ಆರ್. ಪಿ. ಜಿಗಜಿಣಗಿ (ಗಣಿ ಮತ್ತು ಭೂ ವಿಜ್ಞಾನ ಮತ್ತು ಯುವ ಜನ ಸೇವಾ ಹಾಗೂ ಕ್ರೀಡೆಗಳ ರಾಜ್ಯ ಮಂತ್ರಿಗಳು).—

ಅ) ಹೌದು

ಆ) ಇದುವರೆವಿಗೂ ಹೊಸನಗರದ ಕ್ರೀಡಾಂಗಣ ನಿರ್ಮಾಣಕ್ಕೆ ಪ್ರಸ್ತಾವನೆಯು ಬಂದಿರುವುದಿಲ್ಲ

ಶಿವಮೊಗ್ಗ ಕುವೆಂಪು ರಂಗಮಂದಿರದ ಬಗ್ಗೆ

೨೬೯೮. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಪೌನ್ಯ ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿವಮೊಗ್ಗದಲ್ಲಿರುವ 'ಕುವೆಂಪು' ರಂಗ ಮಂದಿರದ ಅಂದಾಜು ವೆಚ್ಚ ಎಷ್ಟು ?

ಆ) ಕಟ್ಟಡದ ಕಾಮಗಾರಿ ಯಾವ ಹಂತದಲ್ಲಿದೆ ಹಾಗೂ ಯಾವಾಗ ಮುಕ್ತಾಯವಾಗುವ ನಿರೀಕ್ಷೆ ಇದೆ ?

ಇ) ಈ ಕಟ್ಟಡದ ಕೆಲಸದಲ್ಲಿ ಕಳಪೆ ಕಾಮಗಾರಿಯು ನಡೆಯುತ್ತಿರುವುದಾಗಿ ದೂರಿರುವುದು ನಿಜವೇ ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು).—

ಅ) ರೂ. ೨೪-೦೦ ಲಕ್ಷಗಳು

ಆ) ರಂಗಮಂದಿರದ ನೆಲಮಟ್ಟದವರೆಗಿನ ಕಾರ್ಯಪೂರ್ಣಗೊಂಡಿದ್ದು, ಗ್ರೀನ್ ರೂಂ ಹಾಗೂ ಶೌಚ ಗೃಹ ಮುಕ್ತಾಯದ ಹಂತದಲ್ಲಿದೆ. ೧೯೯೦ ಮಾರ್ಚ್‌ನಲ್ಲಿ ಕಟ್ಟಡವನ್ನು ಸಂಪೂರ್ಣಗೊಳಿಸುವ ನಿರೀಕ್ಷೆ ಇದೆ

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

ಬೆಂಗಳೂರು ನಗರ ಸಭೆಯ ಭೂಮಿಯನ್ನು ಗುತ್ತಿಗೆ ನೀಡಿರುವ ಬಗ್ಗೆ

೨೬೯೯. ಶ್ರೀ ಗೋಪಾಲ ಮುಕಂದ ಕಾನಡೆ (ಪಿರ್ಸಿ).—ಪೌನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ನಗರದ ಕೃಷ್ಣಾ ಫ್ಲೋರ್ ಮಿಲ್ ಪಕ್ಕದಲ್ಲಿರುವ ಮಹಾನಗರ ಪಾಲಿಕೆಗೆ ಸೇರಿರುವ ಜಕ್ಕರಾಯನ ಕೆರೆಯನ್ನು ಯಾವುದಾದರೂ ಟ್ರಸ್ಟ್‌ಗೆ ಗುತ್ತಿಗೆ ಆಧಾರದ ಮೇಲೆ ನೀಡಲಾಗಿದೆಯೇ ?

ಅ) ಹಾಗಿದ್ದಲ್ಲಿ, ಎಷ್ಟು ಏಕರೆ ಜಮೀನನ್ನು ಮಂಡಲಾಗಿದೆ ಮತ್ತು ಯಾವ ಪರತ್ತುಗಳ ಮೇಲೆ ನೀಡಲಾಗಿದೆ. ಇದರಿಂದ ನಗರ ಪಾಲಿಕೆಗೆ ವರ್ಷಕ್ಕೆ ಬರುವ ಆದಾಯ ಎಷ್ಟು ?

ಶ್ರೀ ಎಂ. ಚಿಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಹೆಗ್ಗಡದೇವನ ಕೋಟೆಯಲ್ಲಿ ಜಿಲ್ಲಾ ಪರಿಷತ್ತಿನ ಕಾರ್ಯಗಳ ಬಗ್ಗೆ

೨೬೩೧. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ).— ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಹಾಗೂ ಪಕ್ಷ್ಣ ಹಾಗೂ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೆಚ್. ಡಿ. ಕೋಟೆ ತಾಲ್ಲೂಕಿನಲ್ಲಿ ಜಿಲ್ಲಾ ಪರಿಷತ್ ರಚನೆ ನಂತರ ಜಿಲ್ಲಾ ಪರಿಷತ್ತಿನಿಂದ ಮಾಡಿಸಲಾಗಿರುವ ಕೆಲಸಗಳೆಷ್ಟು (ಯಾವ ಕೆಲಸಗಳು ಎಲ್ಲೆಲ್ಲಿ ವಿವರ ನೀಡುವುದು)

ಆ) ಈ ಕೆಲಸಗಳಿಗಾಗಿ ಒದಗಿಸಲಾಗಿರುವ ಹಣವೆಷ್ಟು (ವಿವರ ನೀಡುವುದು)

ಇ) ಈ ಕೆಲಸಗಳಿಗೆ ಪಾವತಿ ಮಾಡಿರುವ ಮತ್ತು ಮಾಡಬೇಕಾಗಿರುವ ಹಣವೆಷ್ಟು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು).—

ಅ) ಅನುಬಂಧ 'ಅ'ನಲ್ಲಿ ವಿವರಿಸಿದೆ

ಆ) ಅನುಬಂಧ 'ಆ'ನಲ್ಲಿ ವಿವರಿಸಲಾಗಿದೆ

ಇ) ಅನುಬಂಧ 'ಇ'ನಲ್ಲಿ ಕೊಡಲಾಗಿದೆ

ಅನುಬಂಧ 'ಅ'

ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ೭೨೩ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. ಕಾವಗಾರಿಗಳ ವಿವರ ಈ ಕೆಳಕಂಡಂತಿದೆ.

೧.	ಇಂಜಿನಿಯರಿಂಗ್ ಇಲಾಖೆ	...	೪೪೪
೨.	ಭೂ ಸೇನಾ ನಿಗಮ	...	೧೧೭
೩.	ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಮಂಡಲಕ	...	೩೬
೪.	ಅರಣ್ಯ ಇಲಾಖೆ	...	೬೭
	ಒಟ್ಟು ಕಾಮಗಾರಿಗಳು	...	೭೨೩

ಅನುಬಂಧ 'ಆ'

ಒಟ್ಟು ಕಾವಗಾರಿಗಳಿಗೆ ಬಿಡುಗಡೆಯಾದ ಹಣ ... ೧,೨೪,೨೯೭೧-೦೦ ರೂಪಾಯಿಗಳು.
ವಿವರ ಈ ಕೆಳಕಂಡಂತಿದೆ

೧.	ಇಂಜಿನಿಯರಿಂಗ್ ಇಲಾಖೆಗೆ	...	೭೪,೨೧,೦೦೦-೦೦
೨.	ಭೂ ಸೇನಾ ನಿಗಮಕ್ಕೆ	...	೧೧,೯೩,೪೦೦-೦೦
೩.	ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಮಂಡಾಂತರ	...	೭,೯೩,೪೨೫-೦೦
೪.	ಅರಣ್ಯ ಇಲಾಖೆಗೆ	...	೩೦,೨೧,೯೭೭-೦೦
	ಒಟ್ಟು ಬಿಡುಗಡೆಯಾದ ಹಣ	...	೧,೨೪,೨೯೭೧-೦೦